ಕರ್ನಾಟಕ ನಗರ ನೀರುಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ನಕಲಿ ಬ್ಯಾಂಕ್ ಗ್ಯಾರಂಟಿ ನೀಡಿ ಹಣ ಪಡೆದವರು

1300 (898) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯಲ್ಲಿ ನಕಲಿ ಬ್ಯಾಂಕ್ ಗ್ಯಾರಂಟಿ ನೀಡಿ ಹಣ ಪಡೆದು ಕಾಣೆಯಾದ ಗುತ್ತಿಗೆದಾರರ ಸಂಖ್ಯೆ ಎಷ್ಟು?

ಆ) ಈ ಬಗ್ಗೆ ಕೇಂದ್ರ ಲೆಕ್ಕ ಪರಿಶೋಧಕರ ವರದಿಯ ಉಲ್ಲೇಖ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ವರದಿಯಾಧರಿಸಿ ಸರ್ಕಾರ ಯಾರ ಮೇಲೆ ಕ್ರಮ ಕೈಗೊಂಡಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಒಬ್ಬರು

ಆ) ಬಂದಿರುತ್ತದೆ

ಇ) ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಸಿ.ಎ.ಜಿ. ವರದಿಯನ್ನು ಚರ್ಚಿಸಿರುತ್ತದೆ ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ನೀಡಿರುವ ವರದಿಯನ್ನು ಆಧಾರದ ಮೇಲೆ ಲೋಕಾಯುಕ್ತರವರಿಗೆ ವಿಷಯವನ್ನು ಮಹಿಸಿರುತ್ತದೆ.

ಬೆಂಗಳೂರು ನಗರಕ್ಕೆ ಕಾವೇರಿ ನಾಲ್ಕನೇ ಹಂತದ ನೀರು ಸರಬರಾಜು ಯೋಜನೆ

1301 (1625) ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಹುದಿನಗಳ ಯೋಜನೆಯ ಕನಸಾದ ಕಾವೇರಿ ನಾಲ್ಕನೇ ಹಂತದ 1ನೇ ಘಟ್ಟದಿಂದ ನಗರದ ಹಾಗೂ ನಗರ ಹೊರ ವಲಯದ ಎಷ್ಟು ಜನವಸತಿ ಪ್ರದೇಶಗಳಿಗೆ ನಿರೋದಗಿಸಬಹುದಾಗಿದೆ.

ಆ) ಈ ಯೋಜನೆಯನ್ನು ಯಾವಾಗಿನಿಂದ ಕಾರ್ಯಗತಗೊಳಿಸಲಾಗುವುದು; ನೀರಿನ ಸಾಮಥ್ಯ ಎಷ್ಟು;

ಇ) ಯಾವ ಯಾವ ನಗರಸಭೆಗಳ ವ್ಯಾಪ್ತಿಗೆ ಇದರ ಪ್ರಯೋಜನ ಲಭಿಸಲಿದೆ;

ಈ) ಸದರಿ ಯೋಜನೆ ಅನುಷ್ಠಾನಗೊಂಡು ಇಷ್ಟು ದಿನವಾದರೂ ಪೈಪ್‌ಲೈನ್ ಅಳವಡಿಸದಿರುವ ಅಂಶ ನಿಜವೇ;

ಉ) ಇದರ ಉದ್ದೇಶಿತ ಅಂದಾಜುವೆಚ್ಚ ಎಷ್ಟು ಇದ್ದು ಎಷ್ಟು ಅವಧಿಯೊಳಗೆ ಪೂರ್ಣಗೊಳಿಸಲಾಗುವುದು.

ಊ) ಇದಕ್ಕಾಗಿ ರೂಪು ರೇಷೆಗಳು ಸಿದ್ಧಪಡಿಸಲಾಗಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ನಗರದ ಪಶ್ಚಿಮ ವಿಭಾಗ ಹಾಗೂ ಹೊಸದಾಗಿ ಸೇರ್ಪಡೆಯಾದ ನಗರದ 27 ವಾರ್ಡುಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಲಾದ ಹೊಸ ಬಡಾವಣೆಗಳಾದ ಬನಶಂಕರಿ 6ನೇ ಹಂತ, ಅಂಜನಾಪುರ, ಬಿಟಿಎಂನ 4 ಮತ್ತು 6ನೇ ಹಂತ ಹಾಗೂ ಹೊರ

ವಲಯ 7 ನಗರಸಭೆ ಹಾಗೂ 1 ಪುರಸಭೆ ಒಳಗೊಂಡಂತೆ ಒಟ್ಟು 17 ಜನವಸತಿ ಪ್ರದೇಶಗಳಿಗೆ ನೀರನ್ನು ಒದಗಿಸಬಹುದಾಗಿದೆ.

ಆ) ಈ ಯೋಜನೆ ಜುಲೈ 2002 ರಿಂದ ಕಾರ್ಯಗೊಂಡು, ಬೆಂಗಳೂರು ನಗರಕ್ಕೆ ದಿನಪ್ರತಿ 165 ರಿಂದ 210 ದಶಲಕ್ಷ ಲೀಟರ್ ನೀರನ್ನು ವಿತರಣೆ ಮಾಡಲಾಗುತ್ತಿದೆ. ಈ ಯೋಜನೆಯ ಒಟ್ಟು ಸಾಮರ್ಥ್ಯ ದಿನಂಪ್ರತಿ 270 ದಶಲಕ್ಷ ಲೀಟರ್‌ಗಳು.

ಇ) ಬೊಮ್ಮನಹಳ್ಳಿ ಬ್ಯಾಟರಾಯನಪುರ, ದಾಸರಹಳ್ಳಿ, ಕೆ.ಆರ್. ಪುರಂ, ಮಹದೇವಪುರ, ರಾಜರಾಜೇಶ್ವರಿನಗರ, ಯಲಹಂಕ ನಗರಸಭೆಗಳು ಮತ್ತು ಕೆಂಗೇರಿ ಪುರಸಭೆ ಪ್ರದೇಶಗಳಿಗೆ ಈ ಯೋಜನೆಯಿಂದ ನೀರು ಸರಬರಾಜು ಮಾಡುವ ಅವಕಾಶವಿದೆ.

ಈ) ಮಹಾನಗರ ಪಾಲಿಕೆಗೆ ಈಗಾಗಲೇ ಸೇರ್ಪಡೆಯಾದ 27 ವಾರ್ಡುಗಳಲ್ಲಿ ಕೊಳವೆ ಜೋಡಣೆ ಅಳವಡಿಸುವ ಕಾಮಗಾರಿಗಳು ನಡೆಯುತ್ತಿದೆ. ಉಳಿದಂತೆ, ಮೇಲ್ಕಂಡ ನಗರಸಭೆಗಳು ಮತ್ತು ಪುರಸಭೆ ಪ್ರದೇಶಗಳಲ್ಲಿ ಕೊಳವೆ ಮಾರ್ಗಗಳನ್ನು ಅಳವಡಿಸಿರುವುದಿಲ್ಲ. ಕಾರಣ ಹಣ ನಿಯೋಜನೆಯ ಬಗ್ಗೆ ತೀರ್ಮಾನ ಕೈಗೊಳ್ಳಬೇಕಾಗಿದೆ.

ಉ) ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾದ 27 ವಾರ್ಡುಗಳು ಹಾಗೂ 7 ನಗರಸಭೆ ಮತ್ತು ಒಂದು ಪುರಸಭೆ ಸೇರಿ ಒಟ್ಟು ಅಂದಾಜು ವೆಚ್ಚ ರೂ. 743.16 ಕೋಟಿಗಳು. ಈ ಕಾಮಗಾರಿಯನ್ನು ಅನುಷ್ಠಾನಗೊಂಡಂದಿನಿಂದ 2 $^{1}/_{2}$ ರಿಂದ 3 ವರ್ಷಗಳೊಳಗಾಗಿ ಪೂರ್ಣಗೊಳಿಸಲಾಗುವುದು.

ಊ) ಹೌದು.

ಬೆಂಗಳೂರು ನಗರಕ್ಕೆ ಹೆಚ್ಚುವರಿ ಹೊರ ವರ್ತುಲ ರಸ್ತೆ ನಿರ್ಮಾಣ

1302 (1651) ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) ಮತ್ತು ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರಕ್ಕೆ ಹೆಚ್ಚುವರಿಯಾಗಿ ಮತ್ತೊಂದು ಹೊರ ವರ್ತುಲ ರಸ್ತೆಯನ್ನು ನಿರ್ಮಿಸಲು ಸರ್ಕಾರ ಆಲೋಚಿಸಿದೆಯೇ;

ಆ) ಈ ರಸ್ತೆ ನಿರ್ಮಾಣಕ್ಕಾಗಿ ಯೋಜನೆ ಸಿದ್ಧಗೊಂಡಿದೆಯೇ;

ಇ) ಸದರಿ ಹೊರ ವರ್ತುಲ ರಸ್ತೆಯು ಹಾಯ್ದು ಹೋಗುವ ಪ್ರದೇಶಗಳ್ಯಾವುವು; ಹಾಲಿ ಇರುವ 100 ಅಡಿ ಹೊರ ವರ್ತುಲ ರಸ್ತೆಗಿಂತ ಎಷ್ಟು ಪಟ್ಟು ಹೆಚ್ಚಿಗೆ ದೂರದಲ್ಲಿ ಇದನ್ನು ನಿರ್ಮಿಸಲಾಗುತ್ತದೆ; (ವಿವರ ನೀಡುವುದು);

ಈ) ಇದರಿಂದಾಗಿ ದಿನೇ ದಿನೇ ಹೆಚ್ಚುತ್ತಿರುವ ವಾಹನ ದಟ್ಟಣೆಯನ್ನು ಕಡಿಮೆಗೊಳಿಸಲು ಸಾಧ್ಯವಾಗುತ್ತದೆಯೇ;

ಉ) ಇದನ್ನು ಯಾವಾಗ ಕೈಗೆತ್ತಿಕೊಳ್ಳಲಾಗುತ್ತದೆ; ನಿಗಧಿತ ಗುರಿ ಹಾಕಿಕೊಳ್ಳಲಾಗಿದೆಯೇ ಮತ್ತು ಇದರ ನಿರ್ಮಾಣ ವೆಚ್ಚವೆಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಹೌದು.

ಆ) ಇಲ್ಲ ಸರ್ವೆ ನಡೆಸಲು ಕ್ರಮ ತೆಗೆದುಕೊಳ್ಳಲಾಗಿದೆ.